# ಮಂಗಳೂರು ವಿಶ್ವವಿದ್ಯಾನಿಲಯ

ದಿನಾಂಕ 27.08.2021ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2021ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಗಳು.

ಉಪಸ್ಥಿತರು:

ಅನುಪಸ್ಥಿತರು:

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

➢ **ಸ್ವಾಗತ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಬಿ) ಪ್ರಕಾರ ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಜಂಟಿ ನಿರ್ದೇಶಕರ ನೆಲೆಯಲ್ಲಿ ಹಾಜರಾಗಲಿರುವ ಡಾ. ಜೆನಿಫರ್ ಲೋಲಿಟಾ ಸಿ, ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಮಂಗಳೂರು ಇವರನ್ನು ಸದರಿಯವರ ಅನುಪಸ್ಥಿತಿಯಲ್ಲಿ ಕುಲಸಚಿವರು ಸಭೆಗೆ ಸ್ವಾಗತಿಸಿದರು.

➢ **ಕೃತಜ್ಞತೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಬಿ) ಪ್ರಕಾರ ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಜಂಟಿ ನಿರ್ದೇಶಕರ ನೆಲೆಯಲ್ಲಿ ಹಾಜರಾಗುತ್ತಿದ್ದ ಶ್ರೀ ವಸಂತರಾಜ ಶೆಟ್ಟಿ ಕೆ., ಇವರು ವಯೋನಿವೃತ್ತಿ ಹೊಂದಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.

ಇವರು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 - ಒಂದು ದಿನದ ವಿಚಾರ ಸಂಕಿರಣ ಕಾರ್ಯಕ್ರಮವನ್ನು ದಿನಾಂಕ 30.08.2021ರಂದು ಹಮ್ಮಿಕೊಳ್ಳಲಿರುವ ವಿಷಯವನ್ನು ಸಭೆಗೆ ತಿಳಿಸಿದರು. ಸದರಿ ಸಮಾರಂಭದ ಉದ್ಘಾಟನಾ ಕಾರ್ಯಕ್ರಮವನ್ನು ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರಾದ

ಡಾ. ಅಶ್ವಥ್ ನಾರಾಯಾಣ ಸಿ. ಎನ್. ಇವರು ನೆರವೇರಿಸಲಿರುವ ವಿಷಯವನ್ನು ತಿಳಿಸಿದರು. ಸದರಿ ಸಭೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷರಾದ ಪ್ರೊ. ಬಿ. ತಿಮ್ಮೇಗೌಡ ಹಾಗೂ ಕೇಂದ್ರ ಮತ್ತು ರಾಜ್ಯದ ಸಚಿವರು, ಲೋಕಸಭಾ ಸದಸ್ಯರು ಹಾಗೂ ಶಾಸಕರುಗಳು ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಲಿರುವ ವಿಷಯವನ್ನು ಸಭೆಗೆ ತಿಳಿಸಿದರು. ಮುಂದುವರಿದು, ಸಭೆಯನ್ನು ಕೋವಿಡ್ -19ರ ಬಗ್ಗೆ ಸರಕಾರದಿಂದ ಹೊರಡಿಸಲಾಗುವ ಎಲ್ಲಾ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ನಡೆಸಲಾಗುವುದೆಂದು ತಿಳಿಸಿದರು.

2. ಮಾನ್ಯ ಉನ್ನತ ಶಿಕ್ಷಣ ಸಚಿವರ ಆದೇಶದ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಮೂಡಬಿದ್ರೆಯ ಬನ್ನಡ್ಕದಲ್ಲಿ ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು ಸರಕಾರದ ಅನುದಾನದೊಂದಿಗೆ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿರುವ ವಿಷಯವನ್ನು ಸಭೆಗೆ ತಿಳಿಸಿದರು. ಸದರಿ ಕಾಲೇಜಿನ ಅನುದಾನವನ್ನು ಸರಕಾರದಿಂದ ಒದಗಿಸುವ ಭರವಸೆಯನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ನೀಡಿರುತ್ತಾರೆ ಎಂಬುದಾಗಿ ತಿಳಿಸಿದರು.

   ಮಂಗಳೂರು ವಿಶ್ವವಿದ್ಯಾನಿಲಯದಿಂದ ನಡೆಸಲಾಗುತ್ತಿರುವ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ, ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಮತ್ತು ವಿಶ್ವವಿದ್ಯಾನಿಲಯ ಕಾಲೇಜು, ನೆಲ್ಯಾಡಿ ಈ ಮೂರೂ ಕಾಲೇಜುಗಳಿಗೂ ಅನುದಾನ ಬಿಡುಗಡೆಗಾಗಿ ಸರಕಾರಕ್ಕೆ ಪತ್ರ ಬರೆಯುವುದೆಂಬುದಾಗಿ ತಿಳಿಸಿದರು.

3. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿಕ್ಕಅಳುವಾರ, ಕೊಡಗು ಇಲ್ಲಿ ಐದು ವರ್ಷಗಳ ಇಂಟಗ್ರೇಟೆಡ್ ಪ್ರೋಗ್ರಾಂ ಇನ್ ಲಾ ವನ್ನು ಪ್ರಾರಂಭಿಸುವ ಆಶಯವನ್ನು ಸಭೆಗೆ ತಿಳಿಸಿದರು.

4. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಆಶಯದೊಂದಿಗೆ ವಿವಿಧ ನಮೂನೆಯ add-on ಕಾರ್ಯಕ್ರಮಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರಿಚಯಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಹಾಗೂ SWAYAM ಪ್ಲಾಟ್‌ಫಾರ್ಮ್ ನಡಿಯಲ್ಲಿಯೂ ಹೊಂದಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಆಯ್ದುಕೊಳ್ಳುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸಲಾಗುವುದೆಂಬ ವಿಷಯವನ್ನು ತಿಳಿಸಿದರು.

5. NAAC ಗೆ ಸಂಬಂಧಿಸಿದ ಮಾಹಿತಿಯನ್ನು ಕ್ಲಪ್ತ ಸಮಯದಲ್ಲಿ ಕ್ರೋಢೀಕರಿಸಲು ಸಹಾಯಕವಾಗುವಂತೆ ವಿಶ್ವವಿದ್ಯಾನಿಲಯದ IQAC ಘಟಕಕ್ಕೆ ಒಬ್ಬ ಸಲಹೆಗಾರರನ್ನು ನೇಮಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

6. ರಾಷ್ಟ್ರೀಯ ಶಿಕ್ಷಣ ನೀತಿ 2020ನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸುಸಜ್ಜಿತವಾಗಿ ಅನುಷ್ಠಾನಗೊಳಿಸಲು Entrepreneurship Development Cellನ್ನು ಸ್ಥಾಪಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

7. ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಕಾಲೇಜುಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕ್ರಮಬದ್ಧವಾಗಿ ಮತ್ತು ಅರ್ಥಪೂರ್ಣವಾಗಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

8. ದಿನಾಂಕ 15.09.2021 ರಿಂದ ದಿನಾಂಕ 17.09.2021ರವರೆಗೆ 16ನೇ ಕನ್ನಡ ವಿಜ್ಞಾನ ಸಮ್ಮೇಳನವನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಹಯೋಗದೊಂದಿಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುತ್ತಿರುವ ವಿಷಯವನ್ನು ಸಭೆಗೆ ತಿಳಿಸಿದರು.

9. ದಿನಾಂಕ 18.09.2021ರಂದು ಮಂಗಳೂರು ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿರುವ ವಿಷಯವನ್ನು ತಿಳಿಸಿದರು.

10. ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಘನತೆವೆತ್ತ ರಾಜ್ಯಪಾಲರನ್ನು ಭೇಟಿಯಾಗಿರುವ ವಿಚಾರವನ್ನು ಸಭೆಗೆ ತಿಳಿಸಿದರು. ಆ ಸಂದರ್ಭದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಭರ್ತಿಗೊಳಿಸಲು ಅನುಮತಿ ನೀಡಬೇಕೆಂಬುದಾಗಿ ಘನತೆವೆತ್ತ ರಾಜ್ಯಪಾಲರಲ್ಲಿ ಮನವಿ ಮಾಡಿಕೊಂಡಿರುವ ವಿಷಯವನ್ನು ಸಭೆಗೆ ತಿಳಿಸಿದರು.

    ವಿಶ್ವವಿದ್ಯಾನಿಲಯದ 40 ನೇ ವಾರ್ಷಿಕ ಘಟಿಕೋತ್ಸವದಂದು ಪ್ರದಾನ ಮಾಡಲಿರುವ ಗೌರವ ಡಾಕ್ಟರೇಟ್ ಪದವಿಗೆ ಸಂಬಂಧಿಸಿ ಹೆಸರುಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ತಿಳಿಸಲು ಸೂಚಿಸಿದರು.

11. ಲಾಕ್ ಡೌನ್ ಅವಧಿಗೆ ಮಾತ್ರ ಸೀಮಿತವಾಗುವಂತೆ ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟ ಅಂಗಡಿ ಮುಂಗಟ್ಟುಗಳ ಬಾಡಿಗೆಯನ್ನು ಮನ್ನಾ ಮಾಡಿರುವುದಾಗಿ ಸಭೆಗೆ ತಿಳಿಸಿದರು.

12. ಕರ್ನಾಟಕ ರಾಜ್ಯದಲ್ಲಿ, ರಾಜ್ಯದ ಇತರೇ ವಿಶ್ವವಿದ್ಯಾನಿಲಯಗಳು, ಕರ್ನಾಟಕ ಪ್ರೌಢ ಶಿಕ್ಷಣ, ಕರ್ನಾಟಕ ಪದವಿ ಪೂರ್ವ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸಿ.ಇ.ಟಿ., ಮುಂತಾದ ಇಲಾಖೆಗಳು ಸಂಬಂಧಪಟ್ಟ ಪರೀಕ್ಷೆಗಳನ್ನು ಈಗಾಗಲೇ ಸುಸೂತ್ರವಾಗಿ ನಡೆಸಿರುವುದರಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿಯೂ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಭೌತಿಕ ತರಗತಿಗಳು ಮತ್ತು ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

    ವಿಶ್ವವಿದ್ಯಾನಿಲಯದ ಬಹುತೇಕ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವರಾಗಿದ್ದು, ನೆಟ್‌ವರ್ಕ್ ಸಮಸ್ಯೆಯಿಂದಾಗಿ online ತರಗತಿಗಳಿಂದ ವಂಚಿತರಾಗಿರುವ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ ದೂರುಗಳು ಬಂದಿರುವುದರಿಂದ ಮಂಗಳೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯ ದಕ್ಷಿಣ ಕನ್ನಡ, ಕೊಡಗು ಮತ್ತು ಉಡುಪಿ ಜಿಲ್ಲೆಗಳ ಮಾನ್ಯ ಜಿಲ್ಲಾಧಿಕಾರಿಗಳಿಗೆ ಈ ಬಗ್ಗೆ ಮನವರಿಕೆ ಮಾಡಲು ಸೂಕ್ತ ಕ್ರಮಕೈಗೊಳ್ಳುವುದಾಗಿಯೂ ತಿಳಿಸಿದರು. ಸಿಂಡಿಕೇಟು ಸದಸ್ಯರಾದ ಡಾ. ಎನ್. ಪಿ. ನಾರಾಯಣ ಶೆಟ್ಟಿ, ಪ್ರಾಂಶುಪಾಲರು, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ ಇವರು ಪ್ರಾಂಶುಪಾಲರ ಸಭೆಯಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ನೆಟ್ ವರ್ಕ್ ಸಮಸ್ಯೆಯನ್ನು ವಿದ್ಯಾರ್ಥಿಗಳು ಎದುರಿಸುತ್ತಿರುವುದರಿಂದ online ಪರೀಕ್ಷೆಗಳನ್ನು ನಡೆಸಲು ತೀವ್ರ ವಿರೋಧ ವ್ಯಕ್ತವಾಗಿರುವ ವಿಚಾರವನ್ನು ಸಭೆಗೆ ತಿಳಿಸಿದರು.

I. ನಡವಳಿಗಳ ದೃಢೀಕರಣ

1. ದಿನಾಂಕ 23.07.2021ರಂದು ನಡೆದ 2021ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

ದಿನಾಂಕ 23.07.2021ರಂದು ನಡೆದ 2021ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಯನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ಅನುಮೋದಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ : ಸಾ.ಸ.4:32(2021) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ., ಬಯೋಮೆಟ್ರಿಕ್ಸ್ ಹಾಗೂ ಸೋಲಾರ್ ಉಪಕರಣಗಳ ಪ್ರಕ್ರಿಯೆ ಮತ್ತು ಕಾರ್ಯಕ್ಷಮತೆಯ ವೈಫಲ್ಯತೆ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಕುರಿತು. |
| ತಿದ್ದುಪಡಿ ನಿರ್ಣಯ: | ಘನತೆವೆತ್ತ ರಾಜ್ಯಪಾಲರ ಕಛೇರಿಗೆ ದಿನಾಂಕ 12.03.2021 ರಂದು ಬರೆಯಲಾದ ಪತ್ರ ಮತ್ತು ದಿನಾಂಕ 10.05.2021, ಘನತೆವೆತ್ತ ರಾಜ್ಯಪಾಲರ ಕಚೇರಿಯಿಂದ ಸ್ವೀಕೃತವಾದ ಪತ್ರ ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಆಂತರಿಕ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಯ ಆಧಾರದಲ್ಲಿ, ಪ್ರಕರಣದ ಬಗ್ಗೆ ನಿವೃತ್ತ ನ್ಯಾಯಾಧೀಶರಿಂದ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಅನುಮತಿ ಕೋರಿ ರಾಜ್ಯ ಸರಕಾರಕ್ಕೆ ಪತ್ರ ಬರೆಯುವುದು. ಪತ್ರದ ಜೊತೆ ರಾಜ್ಯಪಾಲರ ಕಚೇರಿ ಪತ್ರ ಹಾಗೂ ಆಂತರಿಕ ಪರಿಶೀಲನಾ ಸಮಿತಿಯ ವರದಿಯನ್ನು ಲಗತ್ತೀಕರಿಸಿ ಕಳುಹಿಸಿಕೊಡಬಹುದೆಂಬುದಾಗಿ ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ : ಸಾ.ಸ.4:43(2021) |
| ವಿಷಯ: | ತಾತ್ಕಾಲಿಕ ನೆಲೆಯಲ್ಲಿ ಸೇವೆಗೈದು 2005ರಲ್ಲಿ ಖಾಯಂಗೊಂಡ ಸಿಬ್ಬಂದಿಗಳು ಸಲ್ಲಿಸಿರುವ ಮನವಿ ಹಾಗೂ ಈ ಬಗ್ಗೆ ಸದರಿ ಸಿಬ್ಬಂದಿಗಳು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 2314/2021ರ ಮಧ್ಯಂತರ ಆದೇಶದ ಬಗ್ಗೆ. |
| ತಿದ್ದುಪಡಿ ನಿರ್ಣಯ: | ಪ್ರಸ್ತಾವನೆಯಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಸದರಿ ಸಿಬ್ಬಂದಿಗಳ ಖಾಯಂ ಪೂರ್ವದ ಸೇವೆಯನ್ನು ವೇತನ ಭಡ್ತಿ, ರಜೆ ಮತ್ತು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಅಲ್ಲದೆ ಈಗಾಗಲೇ ನಿವೃತ್ತರಾಗಿರುವ ನೌಕರರಿಂದ ಕಡಿತಗೊಳಿಸಿರುವ ವೇತನವನ್ನು ಮರುಪಾವತಿ ಮಾಡುವುದು. ಸದರಿ ನೌಕರರಿಗೆ ಸೇವೆಯನ್ನು ಖಾಯಂಗೊಳಿಸಿದ ದಿನಾಂಕದಿಂದಲೇ (ದಿನಾಂಕ 28.09.2005) ಎಲ್ಲಾ ಸೇವಾ ಸೌಲಭ್ಯಗಳನ್ನು ತಕ್ಷಣ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲು ಸಹ ನಿರ್ಣಯಿಸಲಾಯಿತು.<br>ಸದರಿ ಸಿಬ್ಬಂದಿಗಳು ಮಾನ್ಯ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ಹಿಂಪಡೆಯುವ ಷರತ್ತಿಗೊಳಪಟ್ಟು ಸರಕಾರಕ್ಕೆ ಸಲ್ಲಿಸಲಾದ ಪರಿನಿಯಮದಲ್ಲಿ ಅಳವಡಿಸಲಾದ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸಲು ನಿರ್ಣಯಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.4:49(2021)

ವಿಷಯ: ಶ್ರೀ ರಮೇಶ್ ಕೆ., ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ

ಪ್ರಸ್ತಾವನೆ 1. ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆಯ ಕಾಲೇಜಿನಲ್ಲಿ 1937 ರಿಂದ 2007ರ ತನಕ ಕಾರ್ಯ ನಿರ್ವಹಿಸಿರುವ ವಿದ್ಯಾರ್ಥಿ ಸಹಕಾರ ಸಂಘವನ್ನು ಮುಚ್ಚಿರುವುದರಿಂದ ಇದನ್ನು ಕೂಡಲೇ ಮರು ಪ್ರಾರಂಭಿಸುವಂತೆ ನಿರ್ಣಯ ತೆಗೆದುಕೊಳ್ಳವುದು.

ತಿದ್ದುಪಡಿ ನಿರ್ಣಯ: ಪ್ರಸ್ತಾವನೆಯನ್ನು ಚರ್ಚಿಸಲಾಯಿತು.

ಸದರಿ ವಿಷಯಕ್ಕೆ ಸಂಬಂಧಿಸಿ ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರು ನೀಡಿರುವ ಉತ್ತರವು ಅಸಮರ್ಪಕ ಮತ್ತು ಅಸಮಂಜಸವೆಂದು ಸಿಂಡಿಕೇಟು ಪರಿಗಣಿಸಿರುವುದರಿಂದ ಪ್ರಾಂಶುಪಾಲರಿಗೆ ಈ ಬಗ್ಗೆ ಸೂಕ್ತ ಕಾರಣಕೇಳಿ ನೋಟೀಸು ನೀಡಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ವಿದ್ಯಾರ್ಥಿ ಸಹಕಾರ ಸಂಘವನ್ನು ಈ ಶೈಕ್ಷಣಿಕ ವರ್ಷದಲ್ಲಿ ಮರು ಪ್ರಾರಂಭಿಸಲು ನಿರ್ಣಯಿಸಲಾಯಿತು. ವಿದ್ಯಾರ್ಥಿ ಸಹಕಾರ ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಪರಿಶೀಲಿಸಲು ಈ ಕೆಳಕಂಡ ಸಿಂಡಿಕೇಟು ಸದಸ್ಯರುಗಳ ಸಮಿತಿಯನ್ನು ರಚಿಸಲಾಯಿತು.

ಶ್ರೀ ರಮೇಶ್ ಕೆ., - ಅಧ್ಯಕ್ಷರು

ಶ್ರೀ ಮೋಹನ ಪಡಿವಾಳ್ - ಸದಸ್ಯರು

ಅಧಿಸೂಚನೆಯಲ್ಲಿ ಸಮಿತಿಯ ಕಾರ್ಯವ್ಯಾಪ್ತಿಯನ್ನು ನಿಗದಿಪಡಿವುದು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.4:51(2021)

ವಿಷಯ: ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನ ಪ್ರಭಾರ ಪ್ರಾಂಶುಪಾಲರು ಎರಡು ವರ್ಷಗಳ ಅವಧಿಯನ್ನು ಪೂರ್ಣಗೊಳಿಸಿದ ಬಗ್ಗೆ.

ತಿದ್ದುಪಡಿ ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಖಾಯಂ ನೆಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳ ಸಾಮಾನ್ಯ ಜೇಷ್ಠತಾ ಪಟ್ಟಿಯನ್ನು ಸಿಂಡಿಕೇಟು ಸಭೆಯಲ್ಲಿ ಮಂಡಿಸಿದ ನಂತರ ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವಂತೆ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಾ.ಸ.4:55 (2021)

ವಿಷಯ: ಶಿಕ್ಷಕೇತರ ಉದ್ಯೋಗಿಗಳಿಗೆ ಸಂಬಂಧಿಸಿದ ಜೇಷ್ಠತಾ ಪಟ್ಟಿಯ ಪ್ರಕಟಣೆ ಮತ್ತು ಮುಂಭಡ್ತಿ ನೀಡುವ ಕುರಿತು.

ತಿದ್ದುಪಡಿ ನಿರ್ಣಯ: ಪ್ರಸ್ತಾವನೆಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು.

ದಿನಾಂಕ 21.04.2020 ರ ಬೋಧಕೇತರ ಸಿಬ್ಬಂದಿಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಆಧಾರದಲ್ಲಿ ಮುಂಬಡ್ತಿಗೆ ಲಭ್ಯವಾಗುವ ಖಾಲಿ ಹುದ್ದೆಗಳಿಗೆದುರಾಗಿ ಎಲ್ಲಾ ವೃಂದಗಳ ಅರ್ಹ ಬೋಧಕೇತರ ಸಿಬ್ಬಂದಿಗಳಿಗೆ, ಮುಂಬಡ್ತಿಗೆ ಖಾಲಿ ಹುದ್ದೆಗಳು ಲಭ್ಯವಾದ ದಿನಾಂಕವನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಿ ಮುಂಬಡ್ತಿಯನ್ನು ವಿಸ್ತರಿಸುವುದು. ಸದರಿ ಮುಂಬಡ್ತಿಯನ್ನು, ಬೋಧಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯು ಪರಿಷ್ಕರಣೆಗೊಂಡು ಅಂತಿಮಗೊಂಡಾಗ ಉಂಟಾಗಬಹುದಾದ ಬದಲಾವಣೆಗಳಿಗೆ ಬದ್ಧರಾಗಿರತಕ್ಕದ್ದು ಎಂಬ ಷರತ್ತಿನ ಮೇರೆಗೆ ವಿಸ್ತರಿಸಲು ಅನುಮೋದನೆ ನೀಡಲಾಗಿದೆ.

ಮುಂದುವರಿದು, ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಲ್ಲಿ ಮಂಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿರುವ "ಹಿರಿಯ ಸಹಾಯಕ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಪರಿನಿಯಮ"ದ ಅನುಸಾರ ಹಿರಿಯ ಸಹಾಯಕ ಹುದ್ದೆಗೆ ಭಡ್ತಿ ನೀಡುವ ಸಂದರ್ಭದಲ್ಲಿ ಪೋಷಕ ವೃಂದಗಳಾದ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರ ಎರಡೂ ಹುದ್ದೆಗಳ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ತಿದ್ದುಪಡಿ ಪರಿನಿಯಮದಲ್ಲಿ ತಿಳಿಸಿರುವಂತೆ ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರ ಅನುಪಾತವನ್ನು 4:1 ಎಂದು ಪರಿಗಣಿಸಿ ಸದರಿಯವರುಗಳಿಗೂ ಮೇಲ್ಕಂಡ ಷರತ್ತುಗಳನ್ನು ವಿಧಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಮೇಲಿನ ನಿರ್ಣಯಕ್ಕೆ ಬಾಧಿತವಾಗದಂತೆ, ದಿನಾಂಕ 23.03.2020 ರ ಆದೇಶದಲ್ಲಿ ಮುಂಭಡ್ತಿ ನೀಡುವಾಗ ಆದೇಶಗಳಲ್ಲಿ ಬೆರಳಚ್ಚುಗಾರ-ಕಂ-ಗುಮಾಸ್ತೆ (TCC) ಹುದ್ದೆಯಿಂದ ಶೀಘ್ರಲಿಪಿಗಾರ (Stenographer) ಹುದ್ದೆಗೂ ಅರ್ಹತಾ ದಿನಾಂಕ (07.04.2018) ನಿಗದಿಪಡಿಸಿ, ಅರ್ಹ ಅಭ್ಯರ್ಥಿಗೆ ಭಡ್ತಿ ನೀಡುವುದು.

II. **ಅನುಸರಣಾ ವರದಿಯ ಅನುಮೋದನೆ**

1. ದಿನಾಂಕ 23.04.2021ರಂದು ನಡೆದ 2021ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

ಈ ಕೆಳಗಿನ ಕಾರ್ಯಸೂಚಿಯ ಅನುಸರಣಾ ವರದಿಯನ್ನು ಹೊರತುಪಡಿಸಿ ಉಳಿದಂತೆ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ ಸಾ.ಸ.3:33 (2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಂದ ಬೋಧಕ ಸಿಬ್ಬಂದಿಗಳನ್ನು ಹುದ್ದೆ ಸಹಿತ ವರ್ಗಾವಣೆ ಮಾಡಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಿದ ಸಮಿತಿಯು ಸಲ್ಲಿಸಿದ ವರದಿಯ ಬಗ್ಗೆ.

ನಿರ್ಣಯ: ಸದರಿ ಸಮಿತಿಯು ಸಲ್ಲಿಸಿರುವ ವರದಿಯನ್ನು ತಿದ್ದುಪಡಿಗಳೊಂದಿಗೆ

ಅಂಗೀಕರಿಸಲಾಯಿತು. ಮುಂದುವರಿದು, ಈ ಕೆಳಗಿನಂತೆ ನಿರ್ಣಯಿಸಲಾಯಿತು.

The Syndicate has, after the detailed deliberations, resolved to accept the recommendations made by the Chairman of the Committee as per the report dated 08.04.2021 on the transfer policy with retrospective effect and reject the recommendations submitted by the members of the said Committee having regard to the provisions of law, exigency of the administration and the interest of the students, who are directly affected stakeholders of the transfers of teachers from constituent college to the University / PG Centres.

- ಮೇಲ್ಕಂಡ ನಿರ್ಣಯಕ್ಕೆ ಸಂಬಂಧಿಸಿದ ಅನುಸರಣಾ ವರದಿಯಲ್ಲಿ ದಾಖಲಿಸಲಾದ ಈ ಕೆಳಕಂಡ ಅಂಶಗಳನ್ನು ಕೈಬಿಡುವುದು.
    1. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಂದ ಬೋಧಕ ಸಿಬ್ಬಂದಿಗಳನ್ನು ಹುದ್ದೆ ಸಹಿತ ವರ್ಗಾವಣೆ ಮಾಡಿರುವ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಿದ ಸಮಿತಿಯು ಸಲ್ಲಿಸಿದ ವರದಿಯ ಬಗ್ಗೆ ಸಿಂಡಿಕೇಟ್ ಸದಸ್ಯರಾದ ಪ್ರೊ. ಬಿ. ಉದಯ ಇವರ ಆಕ್ಷೇಪಣೆಯನ್ನು ಕೈಬಿಡುವುದು.
    2. ಸಿಂಡಿಕೇಟು ನಿರ್ಣಯದನುಸಾರ ಅನುಷ್ಠಾನ ಮಾಡಲು ಪರಿನಿಯಮವು ಕುಲಾಧಿಪತಿಗಳಿಂದ ಅಂಕಿತಗೊಳ್ಳಬೇಕಾಗಿರುವುದರಿಂದ ಕರಡು ಪರಿನಿಯಮ (statute) ವನ್ನು ರಚಿಸಬೇಕಾಗಿರುವ ವಿಷಯವನ್ನು ಕೈ ಬಿಡುವುದು.
- ಮುಂದುವರಿದು, ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
    1. ಹುದ್ದೆ ಸಹಿತ ವರ್ಗಾವಣೆಗೊಂಡಿರುವ ಎಲ್ಲಾ ಅಧ್ಯಾಪಕರನ್ನು ಅವರ ದಾಖಲೆಯನ್ನು ಪರಿಶೀಲಿಸಿ, ಸದರಿಯವರು ಆಯ್ಕೆಯಾಗಿರುವ ಮೂಲ ಹುದ್ದೆಗೆ ಹುದ್ದೆ ಸಮೇತ ವರ್ಗಾಯಿಸಿ ದಿನಾಂಕ 08.09.2021ರೊಳಗಡೆ ಆದೇಶ ನೀಡುವ ನಿರ್ಣಯವನ್ನು ಕೈಗೊಂಡು, ಈ ಬಗ್ಗೆ ಕ್ರಮಕೈಗೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

**III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ : ಸಾ.ಸ.5:1(2021) |
| ವಿಷಯ: | ಸಂಯೋಜಿತ ಕಾಲೇಜುಗಳಲ್ಲಿ ನಡೆಸಲಾಗುವ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಮಾರ್ಗಸೂಚಿಗಳ ತಿದ್ದುಪಡಿ ಪರಿನಿಯಮದ ಅನುಮೋದನೆ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲಾಯಿತು.<br>ಸಿಂಡಿಕೇಟು ಸಭೆಯು ತಿದ್ದುಪಡಿ ಪರಿನಿಯಮವನ್ನು ನಿಯಾಮಾನುಸಾರ ಅನುಮೋದಿಸಿತು.<br>ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಇವರು ಮೇಲಿನ |

ನಿರ್ಣಯಕ್ಕೆ ಸಂಬಂಧಿಸಿ, ತಮ್ಮ Dissent Note ನ್ನು ಈ ಕೆಳಗಿನಂತೆ ಸಲ್ಲಿಸಿದರು.

I am not in favour of encouraging any institutions which doesn't have prior permanent long-term affiliation to Mangalore University to start only new professional courses that has more demand and as per NEP we can't encourage a particular new colleges which doesn't have multidisciplinary teaching learning environment. I am also of the opinion that this provision will encourage commercialization of educations. Instead we have to encourage our well established multidisciplinary affiliated colleges to start professional postgraduate courses which have more employability.

ಕಾರ್ಯಸೂಚಿ ಸಂಖ್ಯೆ: ಎಸಿಸಿ : ಸಾ.ಸ.5:2(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಸಂಸ್ಥೆಗಳನ್ನು ಸಂಶೋಧನಾ ಕೇಂದ್ರವನ್ನಾಗಿ ಗುರುತಿಸಿ ಮಾನ್ಯತೆ ನೀಡುವ ಮಾರ್ಗಸೂಚಿಯ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಚರ್ಚಿಸಲಾಯಿತು.

ಪ್ರಸ್ತಾನೆಯಲ್ಲಿ ನಮೂದಿಸಲಾದ ಮಾರ್ಗಸೂಚಿ ಮತ್ತು ಅನುಶಾಸನದಲ್ಲಿ ಈ ಕೆಳಗಿನ ಅಂಶವನ್ನು ಹೆಚ್ಚುವರಿಯಾಗಿ ಸೇರ್ಪಡಿಸಬೇಕೆಂಬುದಾಗಿ ನಿರ್ಣಯಿಸಿ ಅನುಮೋದಿಸಲಾಯಿತು.

e. The college which intends to start Post Graduate Programme should have facilitate the same in the under graduate programme.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.5:3(2021)

ವಿಷಯ: ಪದವಿ ಮತ್ತು ಸ್ನಾತಕೋತ್ತರ ಇಲೆಕ್ಟ್ರಾನಿಕ್ಸ್ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ.

ನಿರ್ಣಯ: ಪದವಿ ಮತ್ತು ಸ್ನಾತಕೋತ್ತರ ಇಲೆಕ್ಟ್ರಾನಿಕ್ಸ್ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.5:4(2021)

ವಿಷಯ: ಸ್ನಾತಕೋತ್ತರ ರಸಾಯನಶಾಸ್ತ್ರ ವಿಷಯಗಳಿಗೆ ಎರಡು ಅಧ್ಯಯನ ಮಂಡಳಿಗಳನ್ನು ರಚಿಸುವ ಬಗ್ಗೆ.

ನಿರ್ಣಯ: ನಿಯಮಾನುಸಾರ ಸ್ನಾತಕೋತ್ತರ ರಸಾಯನಶಾಸ್ತ್ರ ವಿಷಯಗಳಿಗೆ ಎರಡು ಅಧ್ಯಯನ ಮಂಡಳಿಗಳನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.5:5(2021)

ವಿಷಯ: ಪದವಿ ಮತ್ತು ಸ್ನಾತಕೋತ್ತರ ಮಹಿಳಾ ಅಧ್ಯಯನದ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ.

ನಿರ್ಣಯ: ಪದವಿ ಮತ್ತು ಸ್ನಾತಕೋತ್ತರ ಮಹಿಳಾ ಅಧ್ಯಯನದ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟ್ : ಸಾ.ಸ.5:6(2021)

ವಿಷಯ: ಪದವಿ ಮಟ್ಟದ ಬಿಸಿನೆಸ್ ಮ್ಯಾನೇಜ್‌ಮೆಂಟ್, ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ.

ನಿರ್ಣಯ: ಪದವಿ ಮಟ್ಟದ ಬಿಸಿನೆಸ್ ಮ್ಯಾನೇಜ್‌ಮೆಂಟ್, ಗ್ರಾಮೀಣ ಅಭಿವೃದ್ಧಿ ಮತ್ತು ಸಹಕಾರ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ: ಸಾ.ಸ.5:7(2021)

ವಿಷಯ: ಪಿ.ಹೆಚ್‌ಡಿ. ಪದವಿ ಪ್ರದಾನ ಮಾಡಿದ ಬಗ್ಗೆ.

ನಿರ್ಣಯ: ಅವಗಾಹನಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ಸಾ.ಸ.5:8(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕ್ರೀಡಾ ಕಾರ್ಯಕ್ರಮಗಳಿಗೆ ಸಂಬಂಧಿಸಿ ದಿನಾಂಕ 15.02.2021ರಂದು ನಡೆದ ಕ್ರೀಡಾ ಸಲಹಾ ಸಮಿತಿ ಸಭೆಯ ನಡವಳಿಗೆ ಅನುಮೋದನೆ ನೀಡುವ ಬಗ್ಗೆ.

ನಿರ್ಣಯ: ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ : ಸಾ.ಸ.5:9(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ದಾಖಲೆಗಳಲ್ಲಿ ತನ್ನ ಜನನ ದಿನಾಂಕವನ್ನು ತಿದ್ದುಪಡಿಗೊಳಿಸಲು ವಿಶ್ವವಿದ್ಯಾನಿಲಯಕ್ಕೆ ಸೂಕ್ತ ನಿರ್ದೇಶನ ನೀಡಬೇಕೆಂದು ಶ್ರೀಲಕ್ಷ್ಮೀ ಶೆಟ್ಟಿ ಇವರು ಮಂಗಳೂರಿನ ಜಿಲ್ಲಾ ನ್ಯಾಯಾಲಯದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಇತರರ ವಿರುದ್ಧ ಹೂಡಿರುವ ದಾವೆ(O.S.No. 279/2021)

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ : ಸಾ.ಸ.5:10(2021)

ವಿಷಯ: IQAC ಸಲಹಾ ಸಮಿತಿ ಸಭೆಯ ನಡವಳಿ ಹಾಗೂ 2019-20ರ AQAR ಅನುಮೋದನೆ ಬಗ್ಗೆ.

ನಿರ್ಣಯ: ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ : ಸಾ.ಸ.5:11(2021)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರಿನ ಆವರಣದಲ್ಲಿ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಕೊಡಮಾಡಿರುವ ಕಾಮಗಾರಿಗೆ ಸಂಬಂಧಿಸಿದ ಕೊರತೆ ಮೊತ್ತ ಭರಿಸಿಕೊಡಲು ಕಾಲೇಜಿನ 150ನೇ ವರ್ಷಾಚರಣೆಯಲ್ಲಿ ಸಂಗ್ರಹಿಸಲಾದ ಉಳಿಕೆ ಮೊತ್ತದಿಂದ ಪಾವತಿಸಲು ಮಂಜೂರಾತಿ ನೀಡುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು.

ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು, ಇದು ಪಾರಂಪರಿಕ ಶೈಲಿಯ ಕಟ್ಟಡವಾಗಿರುವುದರಿಂದ ಇಲ್ಲಿನ ಮುಖ್ಯ ಪ್ರವೇಶ ದ್ವಾರದ ಗೇಟ್ ಶೆಡ್ ನಿರ್ಮಾಣಕ್ಕೆ ಪುರಾತತ್ವ ಇಲಾಖೆಯಿಂದ ಅನುಮತಿ ಪಡೆದುಕೊಂಡಿರುವ ಬಗೆಗಿನ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:12(2021)

ವಿಷಯ: ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಮತ್ತು ದೂರಶಿಕ್ಷಣ ಕೇಂದ್ರ, ಮಂಗಳೂರು ಇಲ್ಲಿನ ಲೋಪ ದೋಷಗಳ ಕುರಿತು-ತನಿಖಾ ಸಮಿತಿ ಸಲ್ಲಿಸಿದ ವರದಿಯ ಬಗ್ಗೆ.

ನಿರ್ಣಯ: ತನಿಖಾ ಸಮಿತಿಯು ಸಲ್ಲಿಸಿದ ವರದಿಯನ್ನು ಸಿಂಡಿಕೇಟು ಅಂಗೀಕರಿಸಿತು. ತನಿಖಾ ಸಮಿತಿಯು ಸಲ್ಲಿಸಿದ ವರದಿಯ ಆಧಾರದ ಮೇಲೆ ಈ ಕೆಳಗಿನ ನಿರ್ಣಯಗಳನ್ನು ಸಿಂಡಿಕೇಟು ಕೈಗೊಂಡಿತು.

I. ಸದರಿ ಪ್ರಕರಣದಲ್ಲಿ ಭಾಗಿದಾರರಾಗಿರುವ ಸಿಬ್ಬಂದಿಗಳಿಗೆ ಕಾರಣಕೇಳಿ ನೋಟೀಸು ಜಾರಿ ಮಾಡುವುದು.
II. ತಪ್ಪಿತಸ್ಥರನ್ನು ವಿಶ್ವವಿದ್ಯಾನಿಲಯದ ಎಲ್ಲಾ ಜವಾಬ್ದಾರಿಗಳಿಂದಲೂ ಮುಕ್ತಗೊಳಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.
III. ದುರುಪಯೋಗವಾದ ಮೊತ್ತವನ್ನು ಲೆಕ್ಕಾಚಾರ ಮಾಡಿ ಸಂಬಂಧಿತರಿಂದ ವಸೂಲಾತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:13(2021)

ವಿಷಯ: ಪುತ್ತೂರಿನ ನೆಲ್ಯಾಡಿಯಲ್ಲಿ ಪ್ರಾರಂಭಿಸಿದ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಿಸಿದ ಸವಿಸ್ತಾರವಾದ ಮಾಹಿತಿಯನ್ನು ಒದಗಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿ ಕಾಲೇಜಿನ ಪ್ರಾಂಶುಪಾಲರ ಹುದ್ದೆಯನ್ನು ಭರ್ತಿಗೊಳಿಸಲು ಜಾಹೀರಾತು ನೀಡಲು ಸೂಕ್ತ ಕ್ರಮ ಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟ್ : ಸಾ.ಸ.5:14(2021) |
| ವಿಷಯ: | ಶ್ರೀ ರಮೇಶ ಕೆ., ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - Career Oriented ಕೋರ್ಸುಗಳಿಗೆ ಪ್ರಮಾಣ ಪತ್ರ ನೀಡುವ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಸಭೆಗೆ ಮಂಡಿಸಲಾಯಿತು.<br>ಕುಲಸಚಿವರು (ಪ) ಇವರು ಮಂಗಳೂರು ವಿಶ್ವವಿದ್ಯಾನಿಲಯದಿಂದ ನಡೆಸಲಾಗುತ್ತಿರುವ Career Oriented ಕೋರ್ಸುಗಳಿಗೆ ಸಂಬಂಧಿಸಿ, ವಿವರವಾದ ಮಾಹಿತಿಯನ್ನು ಸಭೆಗೆ ನೀಡಿದರು. ಅಂತಿಮವಾಗಿ ಈ ಕೆಳಗಿನ ನಿರ್ಣಯವನ್ನು ಕೈಗೊಳ್ಳಲಾಯಿತು.<br>ಮಂಗಳೂರು ವಿಶ್ವವಿದ್ಯಾನಿಲಯದಿಂದ ಸ್ನಾತಕ ಕಾರ್ಯಕ್ರಮಗಳೊಂದಿಗೆ ನಡೆಸಲಾಗುತ್ತಿರುವ add-on ಕಾರ್ಯಕ್ರಮಗಳ Certificate, Diploma, Advanced Diploma ಕಾರ್ಯಕ್ರಮಗಳಿಗೆ ಪ್ರಸ್ತುತ ನೀಡಲಾಗುತ್ತಿರುವ ಅಂಕಪಟ್ಟಿಗಳ ಜೊತೆಗೆ ಉತ್ತಮ ದರ್ಜೆಯ ಪ್ರಮಾಣ ಪತ್ರಗಳನ್ನು ವಿದ್ಯಾರ್ಥಿಗಳಿಗೆ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟ್ : ಸಾ.ಸ.5:15(2021) |
| ವಿಷಯ: | ಪ್ರೊ. ಎಂ.ಎಸ್. ತಳವಾರ್, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ. |
| ಪ್ರಸ್ತಾವನೆ 1 | Providing free education, counselling and protective services to the children who have lost their parents during COVID pandemic. |
| ನಿರ್ಣಯ: | ಪ್ರಸ್ತಾವನೆಯನ್ನು ಸಭೆಗೆ ಮಂಡಿಸಿ, ಈ ಕೆಳಗಿನ ನಿರ್ಣಯವನ್ನು ಕೈಗೊಳ್ಳಲಾಯಿತು.<br>ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹೆತ್ತವರು ಕೋವಿಡ್‌ನಿಂದಾಗಿ ಮರಣಹೊಂದಿದ್ದಲ್ಲಿ ಸದರಿ ವಿದ್ಯಾರ್ಥಿಗಳಿಗೆ ಪೂರ್ಣವಾಗಿ ಶುಲ್ಕ ವಿನಾಯಿತಿ ನೀಡಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |
| ಪ್ರಸ್ತಾವನೆ 2 | Inclusion of social service activities as integral part of NSS and NCC programmes at UG level |
| ನಿರ್ಣಯ: | NSS ಮತ್ತು NCC ಕಾರ್ಯಕ್ರಮಗಳನ್ನು ಈಗಾಗಲೇ ಪದವಿ ಕಾಲೇಜುಗಳಲ್ಲಿ ನಡೆಸಲಾಗುತ್ತಿದ್ದು, ಅವುಗಳಿಗೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ನೀಡಬಹುದೆಂಬುದಾಗಿ ನಿರ್ಣಯಿಸಲಾಯಿತು. |
| ಪ್ರಸ್ತಾವನೆ 3 | Face-lifting works of Teaching and non-teaching staff quarters at Mangalagangothri campus like, white-wash, painting the doors and windows, compound wall to each block etc. |
| ನಿರ್ಣಯ: | ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.<br>ಮಂಗಳೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿರುವ ಎಲ್ಲಾ ವಸತಿಗೃಹಗಳಿಂದ |

ಕಳೆದ ಐದು ವರ್ಷಗಳಲ್ಲಿ ಸಂಗ್ರಹವಾದ ಮೊತ್ತ ಮತ್ತು ಸದರಿ ವಸತಿಗೃಹಗಳ ದುರಸ್ತಿಗಾಗಿ ವ್ಯಯಿಸಿದ ಮೊತ್ತಗಳ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು ವಸತಿಗೃಹಗಳಿಗೆ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು. ಈ ಬಗ್ಗೆ ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕ್ಯಾಂಪಸ್ ನಲ್ಲಿರುವ ಎಲ್ಲ ವಸತಿಗೃಹಗಳ ವಿವರಗಳೊಂದಿಗೆ ಸದರಿ ವಸತಿ ಗೃಹಗಳಲ್ಲಿ ಎಷ್ಟು ವಾಸಕ್ಕೆ ಯೋಗ್ಯವಾಗಿವೆ, ಎಷ್ಟು ವಸತಿಗೃಹಗಳು ವಾಸಕ್ಕೆ ಯೋಗ್ಯವಾಗಿಲ್ಲ ಎಂಬ ವಿವರಗಳನ್ನೂ ಸಹ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಪ್ರಸ್ತಾವನೆ 4 — Erecting car sheds/vehicle sheds to each block of the quarters.

ನಿರ್ಣಯ: ಪ್ರತಿಯೊಂದು Block ಗೆ ವಾಹನ ತಂಗುದಾಣ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಪ್ರಸ್ತಾವನೆ 5 — Regular maintenance of staff quarters provindg services on 24/7 basis.

ನಿರ್ಣಯ: ವಸತಿಗೃಹಗಳ ನಿರ್ವಹಣೆಯನ್ನು ಮಾಡಲು ಸೂಕ್ತ ಕ್ರಮ ಕೈಗೊಂಡು ಪ್ರತಿ ತಿಂಗಳ ವರದಿಯನ್ನು ಪಡೆದುಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ವಿಶ್ವವಿದ್ಯಾನಿಲಯದ ಅತಿಥಿಗೃಹಗಳಲ್ಲೂ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಸಣ್ಣಪುಟ್ಟ ರಿಪೇರಿಗಳನ್ನು (ವಿದ್ಯುತ್ ಹಾಗೂ ಇತರೇ) ಮಾಡಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟ್ : ಸಾ.ಸ.5:16(2021)

ವಿಷಯ: ಡಾ. ಪಾರ್ವತಿ ಅಪ್ಪಯ್ಯ, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ.

ಪ್ರಸ್ತಾವನೆ 1 — I had raised the issue of the Alumni Association of FMKMCC in the previous two Syndicate meetings but no positive action is taken to implement the decisions of the Syndicate relating to the decisions of the Alumni Association. An attempt is made to reverse the decision of the Syndicate by the Principal of FMKMCC which needs serious concern since it undermines the Syndicate as the governing body of the University.

ನಿರ್ಣಯ: ಪ್ರಸ್ತುತ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

ಫೀಲ್ಡ್ ಮಾರ್ಷಲ್ ಕೆಂ.ಎಂ. ಕಾರ್ಯಪ್ಪ ಕಾಲೇಜಿನ ಕಾಲೇಜು ಅಭಿವೃದ್ಧಿ ಮಂಡಳಿಗೆ ಡಾ. ಪಾರ್ವತಿ ಅಪ್ಪಯ್ಯ, ಇವರನ್ನು ಸದಸ್ಯರನ್ನಾಗಿ ನೇಮಿಸಲು ಸೂಕ್ತ ಕ್ರಮ

ಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

ಪ್ರಸ್ತಾವನೆ 2
Kindly provide details relating to the process/preparations made for the recruitment of Principals as per UGC norms to the two constituent colleges of Mangalore University.

ನಿರ್ಣಯ:
ಈ ಬಗ್ಗೆ ಸರಕಾರದ ಪತ್ರ ಸಂಖ್ಯೆ: ಇಡಿ 101 ಯುಡಿವಿ 2018 ದಿನಾಂಕ 02.06.2020 ನ್ನು ಸಭೆಯ ಗಮನಕ್ಕೆ ತರಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:17(2021)

ವಿಷಯ:
ಯುಜಿಸಿ 6ನೇ ವೇತನ ಶ್ರೇಣಿಗೆ ಸಂಬಂಧಿಸಿದ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಲ್ಲಿ ಸಹಾಯಕ ಪ್ರಾಧ್ಯಾಪಕ (ಹಂತ 1) ರಿಂದ ಸಹಾಯಕ ಪ್ರಾಧ್ಯಾಪಕ (ಹಂತ 2)ಕ್ಕೆ ಹಾಗೂ ಸಹಾಯಕ ಪ್ರಾಧ್ಯಾಪಕ (ಹಂತ 2) ರಿಂದ (ಹಂತ 3)ಕ್ಕೆ ಪದೋನ್ನತಿ ಹೊಂದಿರುವ ಸಹಾಯಕ ಪ್ರಾಧ್ಯಾಪಕರಿಗೆ ಮತ್ತು ದೈಹಿಕ ಶಿಕ್ಷಣ ಬೋಧಕರು ಹಾಗೂ ಗ್ರಂಥಪಾಲಕರಿಗೆ (ಹಂತ 1 ರಿಂದ ಹಂತ 2, ಹಂತ 2 ರಿಂದ ಹಂತ 3 ಹಾಗೂ ಹಂತ 4 ರಿಂದ ಹಂತ 5)ಕ್ಕೆ ಪದೋನ್ನತಿ ಹಂತದ ವೇತನ ನಿಗದೀಕರಣವನ್ನು ಮಾರ್ಪಡಿಸಿ ಒಂದು ವಾರ್ಷಿಕ ಭಡ್ತಿಯನ್ನು ಸೇರಿಸಿ ಪರಿಷ್ಕರಿಸಿ ವೇತನ ಮರುನಿಗದೀಕರಣ ಮಾಡುವ ಬಗ್ಗೆ.

ನಿರ್ಣಯ:
ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ : ಸಾ.ಸ.5:18(2021)

ವಿಷಯ:
ಮಂಗಳೂರು ವಿಶ್ವವಿದ್ಯಾನಿಲಯದ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿದ್ದ ಡಾ.ಎಂ.ಕೃಷ್ಣಮೂರ್ತಿ ಇವರಿಂದ 03 ತಿಂಗಳ ವೇತನವನ್ನು ವಸೂಲು ಮಾಡುವ ಬಗ್ಗೆ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮಂಗಳೂರು ಇಲ್ಲಿ ವಿಶ್ವವಿದ್ಯಾನಿಲಯವು ಹೂಡಿದ್ದ ದಾವೆ (Original Suit) ಸಂಖ್ಯೆ: 15/2019ಗೆ ಸಂಬಂಧಿಸಿದಂತೆ ನ್ಯಾಯಾಲಯದ ತೀರ್ಪು ದಿನಾಂಕ 01.06.2021ವನ್ನು ಪ್ರಶ್ನಿಸಿ ಜಿಲ್ಲಾ ನ್ಯಾಯಾಲಯ ಮಂಗಳೂರು ಇಲ್ಲಿ ಮೇಲ್ಮನವಿ ಮಾಡುವ ಬಗ್ಗೆ.

ನಿರ್ಣಯ:
ಪ್ರಸ್ತಾವನೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಮೇಲ್ಮನವಿ ಸಲ್ಲಿಸುವುದು ಸೂಕ್ತವಲ್ಲವೆಂಬುದಾಗಿ ನಿರ್ಣಯಿಸಲಾಯಿತು. ಆದರೆ, ಇದನ್ನು ಪೂರ್ವೋದಾರಣೆಯೆಂದು (precedent) ಪರಿಗಣಿಸತಕ್ಕದ್ದಲ್ಲ ಎಂಬುದಾಗಿ ಸ್ಪಷ್ಟಪಡಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ : ಸಾ.ಸ.5:19(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ದಾಖಲೆಗಳಲ್ಲಿ ತನ್ನ ಹೆಸರನ್ನು ಹಾಗೂ ತನ್ನ ತಂದೆಯ ಹೆಸರನ್ನು Jagadeesh Rao B.K., S/O. Krishnayya B.L. ಎಂಬುದರ ಬದಲಾಗಿ B.K. Jagadish S/o Krishnayya B.L. ಎಂದು ತಿದ್ದುಪಡಿಗೊಳಿಸಲು ವಿಶ್ವವಿದ್ಯಾನಿಲಯಕ್ಕೆ ಸೂಕ್ತ ನಿರ್ದೇಶನ ನೀಡಬೇಕೆಂದು ಶ್ರೀ ಬಿ.ಕೆ. ಜಗದೀಶ್ ಇವರು ಮಡಿಕೇರಿಯ ಜಿಲ್ಲಾ ನ್ಯಾಯಾಲಯದಲ್ಲಿ ವಿಶ್ವವಿದ್ಯಾನಿಲಯ ಹಾಗೂ ಇತರರ ವಿರುದ್ಧ ಹೂಡಿರುವ ದಾವೆ (O.S. No. 45/2021) ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.5:20(2021)

ವಿಷಯ: ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನಿಂದ ಓರ್ವ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿನಿಂದ ಪ್ರೊ. ಎ. ಕರುಣಾಕರ ಕೋಟೆಗಾರ್ ಇವರನ್ನು ಚುನಾಯಿಸಿ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು : ಸಾ.ಸ.5:21(2021)

ವಿಷಯ: ಸ್ನಾತಕೋತ್ತರ ಕೈಗಾರಿಕಾ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ ರಚನೆಯ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಕೈಗಾರಿಕಾ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚನೆ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ : ಸಾ.ಸ.5:22(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ Institutional Animal Ethics Committee (IAEC)ಗೆ ಕೇಂದ್ರ ಸರಕಾರದಿಂದ ನಾಮನಿರ್ದೇಶನಗೊಂಡ CPCESA ಸದಸ್ಯರಿಗೆ ಉಪಸ್ಥಿತಿ ಭತ್ಯೆ ರೂ.5,000/- ಪಾವತಿಸಲು ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ : ಸಾ.ಸ.5:23(2021)

ವಿಷಯ: ಮೂಡಬಿದಿರೆ ತಾಲೂಕಿನ ಬನ್ನಡ್ಕದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನು 2021-22ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವ ಬಗ್ಗೆ

ನಿರ್ಣಯ: ಪ್ರಸ್ತಾವನೆಯನ್ನು ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:24(2021)

ವಿಷಯ: ಡಾ. ಎಂ. ಜಯಶಂಕರ್, ಸೂಕ್ಷ್ಮಾಣು ಜೀವವಿಜ್ಞಾನದ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರ ಮೇಲಿನ ಆರೋಪಗಳ ಬಗ್ಗೆ - ಸಮಜಾಯಿಷಿಕೆ ಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:25(2021)

ವಿಷಯ: ಡಾ. ಎಂ. ಜಯಶಂಕರ್, ಸೂಕ್ಷ್ಮಾಣು ಜೀವವಿಜ್ಞಾನದ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿದ ಹಾಗೂ ಇಲಾಖಾ ವಿಚಾರಣೆಯ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:26(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಭಾವನೆಯನ್ನು ಮರುನಿಗದಿಪಡಿಸುವ ಸಮಿತಿಯ ವರದಿ ಬಗ್ಗೆ.

ನಿರ್ಣಯ: ಸಮಿತಿಯು ಸಲ್ಲಿಸಿದ ವರದಿಯನ್ನು ಅಂಗೀಕರಿಸಲಾಯಿತು. ವಿಸ್ತೃತವಾದ ಚರ್ಚೆಯ ಬಳಿಕ ವರದಿಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ : ಸಾ.ಸ.5:27(2021)

ವಿಷಯ: ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಸರಕಾರದ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ರಾಷ್ಟ್ರೀಯ ಶಿಕ್ಷಣ ನೀತಿ 2020ರ ಬಗ್ಗೆ ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮತ್ತು ಎಲ್ಲಾ ಸ್ನಾತಕ ಕಾರ್ಯಕ್ರಮಗಳ ಅಧ್ಯಯನ ಮಂಡಳಿ ಅಧ್ಯಕ್ಷರುಗಳಿಗೆ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ : ಸಾ.ಸ.5:28(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2019-20ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ.

ನಿರ್ಣಯ: ನಿಯಮಾನುಸಾರ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:29(2021)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರ ಕಚೇರಿಯಲ್ಲಿ ವಿಶೇಷಾಧಿಕಾರಿಯವರ ನೇಮಕಾತಿ - ಘಟನೋತ್ತರ ಅನುಮೋದನೆ ಬಗ್ಗೆ

ನಿರ್ಣಯ: ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:30(2021)

ವಿಷಯ: ಡಾ. ಅನಿತಾ ರವಿಶಂಕರ್, ಸಮಾಜಶಾಸ್ತ್ರದ ಸಹ ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ಮಂಗಳೂರು ಲೋಕಾಯುಕ್ತ ಪೊಲೀಸ್ ಠಾಣಾ ಮೊಕದ್ದಮೆ - ಅಪರಾಧ ನಿರ್ಣಯದ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ : ಸಾ.ಸ.5:31(2021)

ವಿಷಯ: ಡಾ. ಕರುಣಾಕರ ಎನ್.ವಿ., ತಾತ್ಕಾಲಿಕ/ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರ ಸೇವೆಯನ್ನು ಖಾಯಂಗೊಳಿಸುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ವಿಸ್ತೃತ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಇತರ ವಿಷಯಗಳು**

1. ಮಂಗಳೂರು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾಗಿ ನ್ಯಾಯವಾದಿಗಳ ಯಾದಿಯನ್ನು ಪುನರ್ ರಚಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ನ್ಯಾಯವಾದಿಗಳ ಯಾದಿಯನ್ನು ಪರಿಷ್ಕರಿಸಲು ಈ ಕೆಳಗಿನ ಸಿಂಡಿಕೇಟು ಸದಸ್ಯರುಗಳ ಸಮಿತಿಯನ್ನು ರಚಿಸಲಾಯಿತು. ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಸೂಕ್ತ ಕೈಗೊಳ್ಳಬೇಕೆಂಬುದಾಗಿ ನಿರ್ಣಯಿಸಲಾಯಿತು.

   ಶ್ರೀ ವಿವೇಕಾನಂದ ಪನಿಯಾಲ - ಅಧ್ಯಕ್ಷರು
   ಶ್ರೀ ರವಿಚಂದ್ರ ಪಿ. ಎಂ. - ಸದಸ್ಯರು
   ಶ್ರೀ ರಮೇಶ - ಸದಸ್ಯರು

2. ಕೋವಿಡ್ - 19ರ ಸಂದರ್ಭದಲ್ಲಿನ ಲಾಕ್ ಡೌನ್ ಅವಧಿಯ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಪಾವತಿಸಲು ಸೂಕ್ತ ಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

3. ಯುಜಿಸಿ ವೃತ್ತಿ ಆಧಾರಿತ (add-on) ಕಾರ್ಯಕ್ರಮಗಳನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ನಡೆಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

4. ಪರೀಕ್ಷಾ ಸಂಬಂಧ ವಿದ್ಯಾರ್ಥಿಗಳಲ್ಲಿರುವ ಗೊಂದಲಗಳನ್ನು ನಿವಾರಿಸಲು ಕುಲಸಚಿವರು (ಪ) ಇವರು ಸಂಬಂಧಿತ ಸಮಿತಿಯೊಂದಿಗೆ ಚರ್ಚಿಸಿ ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಲಾಯಿತು.

5. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಬೇರೆ ಬೇರೆ ಘಟಕಗಳಲ್ಲಿ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿರುವವರ ಅವಧಿಯು ಎರಡು ವರ್ಷಗಳಿಗೆ ಮೀರಿದ್ದರೆ ಸದರಿ ಸಂಯೋಜಕರುಗಳನ್ನು ಕೂಡಲೇ ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

   ಮುಂದುವರಿದು, ಪ್ರಸಾರಾಂಗದ ನಿರ್ದೇಶಕರನ್ನು ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

6. ಶೈಕ್ಷಣಿಕ ವರ್ಷ 2021-22 ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕ, ಸ್ನಾತಕೋತ್ತರ ಮತ್ತು ಸಂಶೋಧನಾ ಕಾರ್ಯಕ್ರಮಗಳಿಗೆ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಿರುವ ಅಫ್ಘಾನಿಸ್ತಾನ ದೇಶದ ವಿದ್ಯಾರ್ಥಿಗಳ ಮಾಹಿತಿಯನ್ನು Enforcement Department ನಿಂದ ಪಡೆದುಕೊಂಡು ಸದರಿ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯದಲ್ಲಿ ದಾಖಲಾತಿಗಾಗಿ ಪರಿಗಣಿಸಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

7. ಕೋವಿಡ್ - 19ರ ಹಿನ್ನಲೆಯಲ್ಲಿ ಸಪ್ಟೆಂಬರ್ / ಅಕ್ಟೋಬರ್ 2020ರಲ್ಲಿ ನಡೆದ ಪರೀಕ್ಷಾ ಕಾರ್ಯಗಳಿಗೆ ಮಾತ್ರ ಅನ್ವಯಿಸುವಂತೆ ಮೌಲ್ಯಮಾಪಕರ ಸ್ಥಳೀಯ ಭತ್ಯೆಯನ್ನು (LCA) ಯನ್ನು ರೂ.750.00 (ರೂಪಾಯಿ ಏಳುನೂರ ಐವತ್ತು ಮಾತ್ರ) ಮತ್ತು ದಿನಭತ್ಯೆಯನ್ನು ರೂ.950.00 (ರೂಪಾಯಿ ಒಂಬೈನೂರ ಐವತ್ತು ಮಾತ್ರ) ಎಂದು ನಿಗದಿಪಡಿಸಲಾಗಿತ್ತು. ಸದರಿ ಭತ್ಯೆಯನ್ನು ಪ್ರಸ್ತುತ ಸಾಲಿನ ಪರೀಕ್ಷೆಗಳಿಗೂ ಕೂಡ ಅನ್ವಯಿಸುವಂತೆ ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ತಿಳಿಸಿದರು. ಸಭೆಯು ಇನ್ನು ಮುಂದಿನ ಎಲ್ಲಾ ಪರೀಕ್ಷೆಗಳಿಗೂ ಸದರಿ ಸಂಭಾವನೆಯನ್ನು ನಿಗದಿಪಡಿಸಬಹುದೆಂಬುದಾಗಿ ನಿರ್ಣಯಿಸಿತು.

8. ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯಿಂದ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಭೌತಿಕ ತರಗತಿಗಳು ಮತ್ತು ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವರಿಕೆ ಮಾಡಲು ಸೂರ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಪರೀಕ್ಷೆಗಳನ್ನು Offline ಮೂಲಕವೇ ನಡೆಸಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-

ಕುಲಸಚಿವರು

ಸಹಿ/-

ಕುಲಪತಿಗಳು.